**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 348/2023**

ಬಾ.ಸಾ-03, ಪ್ರಾ.ಸಾ-04

| | | |
|---|---|---|
| ಹೆಸರು | : | ಜನಾರ್ಧನ |
| ತಂದೆಯ ಹೆಸರು | : | ಲೇಟ್ ಸಿದ್ದನಗೌಡ |
| ವಯಸ್ಸು | : | 36 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಸಂಗನಕಲ್ಲು, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ. |

**ದಿನಾಂಕ 25.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 29.05.2023 ರಂದು ತಿ. ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ಬಳಿ ನಾನು, ನನ್ನ ಹೆಂಡತಿ ಗಾಯತ್ರಿ, ಮಗ ಪುನೀತ್, ಮಗಳು ಶ್ರಾವ್ಯ, ನನ್ನ ಸಂಬಂಧಿಕರಾದ ಕೊಟ್ರೇಶ್, ಆತನ ಹೆಂಡತಿ ಸುಜಾತ, ಅವರ ಮಗ ಸಂದೀಪ್, ನನ್ನ ಮತ್ತೊಬ್ಬ ಸಂಬಂಧಿ ಮಂಜುನಾಥ್, ಆತನ ಹೆಂಡತಿ ಪೂರ್ಣಿಮಾ, ಅವರ ಮಕ್ಕಳಾದ ಪವನ್, ಕಾರ್ತಿಕ್ ಮತ್ತು ನನ್ನ ಸ್ನೇಹಿತ ಶಶೀಧರ್ ಸೇರಿ ಒಟ್ಟು 12 ಜನರು ಇನೋವಾ ಕಾರಿನಲ್ಲಿ ಮಹದೇಶ್ವರ ಬೆಟ್ಟದ ಕಡೆಯಿಂದ ಬರುತ್ತಿರುವಾಗ ಆ ಕಾರು ಮತ್ತು ಖಾಸಗಿ ಬಸ್ ನಡುವೆ ಅಪಘಾತವಾಗಿರುತ್ತದೆ.

ನಾವು ಬರುತ್ತಿದ್ದ ಕಾರಿನ ಚಾಲಕ ಮತ್ತು ಆ ಬಸ್ಸಿನ ಚಾಲಕ ತಮ್ಮ ತಮ್ಮ ವಾಹನಗಳನ್ನು ವೇಗವಾಗಿ ಚಾಲನೆ ಮಾಡಿದ್ದರು. ಅಪಘಾತವು ಸುಮಾರು ಮಧ್ಯಾಹ್ನ 1.30 ಗಂಟೆಗೆ ಆಗಿದ್ದು, ಸ್ಥಳದಲ್ಲಿ 9 ಜನರು ಮರಣ ಹೊಂದಿದ್ದು, ನಾನು, ನನ್ನ

ಮಗ ಪುನೀತ್ ಮತ್ತು ಸದರಿ ಕೊಟ್ರೇಶಿ ರವರ ಮಗ ಸಂದೀಪ್ ಆಸ್ಪತ್ರೆಗೆ ದಾಖಲಾಗಿದ್ದು, ಸದರಿ ಸಂದೀಪ್ ಮರಣ ಹೊಂದಿರುತ್ತಾರೆ.

ಅಪಘಾತವು ಎರಡೂ ವಾಹನಗಳ ಚಾಲಕರ ತಪ್ಪಿನಿಂದ ಆಗಿದೆ.

ಆ ಎರಡೂ ವಾಹನಗ ಭಾವಚಿತ್ರಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ನಿಪಿ.12 ರಿಂದ 15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತನ ಪರ**

ನಮ್ಮ ಇನೋವಾ ಕಾರಿನಲ್ಲಿದ್ದವರೆಲ್ಲರೂ ನಿದ್ರೆಗೆ ಜಾರಿದ್ದೇವು ಎಂದರೆ ಸರಿ. ನಮ್ಮ ಆ ಕಾರು ರಸ್ತೆಯ ಎಡಕ್ಕೆ ಚಲಿಸುತ್ತಿತ್ತು ಎಂದರೆ ಸರಿ. ಅದೇ ರೀತಿ ಸದರಿ ಖಾಸಗಿ ಬಸ್ ರಸ್ತೆಯ ಎಡಕ್ಕೆ ಚಲಿಸುತ್ತಿತ್ತು ಎಂದರೆ ಸರಿ. ನಮ್ಮ ಕಾರಿನ ಚಾಲಕ ಆ ಕಾರನ್ನು ಅತಿವೇಗವಾಗಿ ಚಲಾಯಿಸಿ ರಸ್ತೆಯ ಬಲಕ್ಕೆ ಬರುತ್ತಿದ್ದ ಆ ಖಾಸಗಿ ಬಸ್‌ಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಅಪಘಾತಕ್ಕೆ ಖಾಸಗಿ ಬಸ್‌ನ ಚಾಲಕ ಕಾರಣ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**